# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿಸಭೆ, ದಿನಾಂಕ: 22-10-2021ರ
## ಸಭಾ ನಡುವಳಿ

**ದಿನಾಂಕ: 22-10-2021ರಂದು ಬೆಳ್ಳಿಗೆ 9.00 ಗಂಟೆಗೆ** ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯನೋಡಲ್ ಅಧಿಕಾರಿಗಳಾದ ಶ್ರೀ ರೆಡ್ಡಿ ಶಂಕರಬಾಬು, ಮಾನ್ಯ ವಿಶೇಷ ಆಯುಕ್ತರು, (ಆಸ್ತಿಗಳು) ಬಿಬಿಎಂಪಿರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿಬಿಎಂಪಿ ಸಮುದಾಯ ಭವನದಲ್ಲಿ ನಡೆದ ವಾರ್ಡ್‌ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ರೆಡ್ಡಿ ಶಂಕರ ಬಾಬು | ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) ಹಾಗೂ ಮಾನ್ಯ ವಿಶೇಷ ಆಯುಕ್ತರು (ಆಸ್ತಿಗಳು), ಬಿಬಿಎಂಪಿ |
| 2 | ಶ್ರೀ ಸುರೇಶದೇವತರಾಜ್ | ಸಹಾಯಕಅಭಿಯಂತರರು ಹಾಗೂ ಸದಸ್ಯಕಾರ್ಯದಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಡಾ|| ಅಲೀನಾ ಜನತ್ | ವೈದ್ಯಾಧಿಕಾರಿ, ಪ್ರಾ.ಆ.ಕೇಂ ಹೆಗಡೆನಗರ |
| 4 | ಶ್ರೀಮತಿ ಚಿತ್ರಾಜಯರಾಮ್ | ಸ.ಕಾ.ಅ (ಘನತ್ಯಾಜ್ಯ) ಬ್ಯಾಟರಾಯನಪುರವಿಭಾಗ, |
| 5 | ಶ್ರೀ ಕಿರಣ್ ಬಿ | ಸ.ಕಾ.ಅ ಯೋಜನಾ ವಿಭಾಗ, ಯಲಹಂಕ ವಲಯ |
| 6 | ಶ್ರೀ ಚಂದನಎಸ್. | ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಶ್ರೀ ರಾಜಶೇಖರ್ ಮೇಟಿ | ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ,ನಿರ್ವಹಣೆ |
| 8 | ಶ್ರೀ ಬಾಬುರೆಡ್ಡಿ | ಕಿರಿಯಅಭಿಯಂತರರು. ವಿದ್ಯುತ್ ಬಿಬಿಎಂಪಿ |
| 9 | ಶ್ರೀ ವಿ. ಪ್ರೇಮಕುಮಾರ್ | ಹಿ.ಆ. ಪರಿವೀಕ್ಷಕರುವಾರ್ಡ್ ನಂ. 06 (ಥಣಿಸಂದ್ರ) |
| 10 | ಶ್ರೀ ಮಹೇಶ್‌ಕುಮಾರಎಲ್. | ಕಿ.ಆ. ಪರಿವೀಕ್ಷಕರುವಾರ್ಡ್ ನಂ. 06 (ಥಣಿಸಂದ್ರ) |
| 11 | ಶ್ರೀ ವೆಂಕಟೇಶ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |
| 12 | ಶ್ರೀ ಶಿವರಾಜ ಬಿ ಎ | ಮಾರ್ಶಲ್‌ವಾರ್ಡ್ ನಂ. 06 |

**ಶ್ರೀ ಸುರೇಶ ದೇವತರಾಜ್** ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ **ಶ್ರೀ ರೆಡ್ಡಿ ಶಂಕರ ಬಾಬು, ಮಾನ್ಯ ವಿಶೇಷ ಆಯುಕ್ತರು,** (ಆಸ್ತಿಗಳು) ಬಿಬಿಎಂಪಿ ರವರಿಗೆ ಹಾಗೂ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಕೋವಿಡ್ -19 ರ ಸಂಬಂಧ ಸೊಂಕು ಹರಡವುದನ್ನುತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮಂಜಾಗ್ರತ ಕ್ರಮಗಳ ಬಗ್ಗೆ**

- ಶ್ರೀಮತಿ ಡಾ// ಅಲಿನಾ ಜನತ್, ವೈದ್ಯಾಧಿಕಾರಿಗಳು ಹೆಗಡೆನಗರ ಪ್ರಾಥಮೀಕ ಆರೋಗ್ಯ ಕೇಂದ್ರರವರು ಮಾತನಾಡಿ ಸಾರ್ವಜನಿಕರು ಕಡ್ಡಾಯವಾಗಿ ಎರಡನೇ ಡೋಸ್ ವ್ಯಾಕ್ಸಿನ್ ತೆಗೆದುಕೊಳ್ಳಬೇಕು. ಕೋರೊನಾ ಡೆಲ್ಟಾ ಪ್ಲಸ್ ಭೀತಿವಿರುವದರಿಂದ ಸಾರ್ವಜನಿಕರು ಬಹಳ ಎಚ್ಚರಿಕೆಯಿಂದ ಇರಬೇಕು ಹಾಗೂ ಕೋರೋನಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸಭೆಯಲ್ಲಿ ತಿಳಿಸಿದರು.

2. ವಾರ್ಡ್ ವ್ಯಾಪ್ತಿಯಲ್ಲಿಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂದಿಸಿದ ವಿಷಯಳ ಬಗ್ಗೆ.

- ದಾಸಪ್ಪ ಹೆಗಡೆನಗರ ರವರು ಮಾತನಾಡಿ ಹೆಗಡೆನಗರ ಪೂರ್ವಭಾಗದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರು ಒಳಚರಂಡಿ ಕೊಳವೆಗಳನ್ನು ಅಳವಡಿಸುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕಾರಣ ರಸ್ತೆಗಳಲ್ಲಿನ ಹೆಚ್ಚುವರಿ ಮಣ್ಣು ತೆಗೆದು ರಸ್ತೆಗಳನ್ನು ಸಮಮಟ್ಟ ಮಾಡಬೇಕಾಗಿ ಕೋರಿದರು. ಹೆಗಡೆನಗರ ವೃತ್ತದ ಹತ್ತಿರವಿರುವ ಪ್ಯಾನಲ್ ಬೋರ್ಡ್ ಹಾಳಾದ ಕಾರಣ ಬೀಗ ಹಾಕಲು ತೊಂದರೆಯಾಗುತ್ತಿರುವ ಕಾರಣ ಹೊಸದಾಗಿ ಪ್ಯಾನಲ್ ಬೋರ್ಡ್ ಅಳವಡಿಸಬೇಕಾಗಿ ಕೋರಿದರು.
- ವಾರ್ಡ್ ಅಭಿಯಂತರರು ಮಾತನಾಡಿ ಭೂವನೇಶ್ವರಿನಗರ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ಬಾಕಿಯಿದ್ದು, ಭುವನೇಶ್ವರಿನಗರದ ಎಲ್ಲಾ'ಎ' ಅಡ್ಡ ರಸ್ತೆಗಳಿಂದ ಒಳಚರಂಡಿಯ ಸಂಪರ್ಕ ಮುಖ್ಯ ರಸ್ತೆಗೆ ನೀಡಬೇಕಾಗಿರುವದರಿಂದ ಈ ಕೆಲಸವನ್ನು ಕೂಡಲೇ ಪೂರ್ಣಗೊಳಿಸಲು ಕ್ರಮ ವಹಿಸಬೇಕಾಗಿ ಕೋರಿದರು. ಅಬುಬುಕಾರ ಮಸೀದಿ ರಸ್ತೆ, ಪಿ. ಐಂಡ್ ಟಿ ಬಡಾವಣೆ, ಥಣಿಸಂದ್ರ ಸರ್ಕಾರಿ ಶಾಲೆ ಹತ್ತಿರದ ಅಡ್ಡರಸ್ತೆಗಳು, ಥಣಿಸಂದ್ರ ಗ್ರಾಮದ ರಸ್ತೆಗಳು ಅಭಿವೃದ್ಧಿ ಪಡಿಸಬೇಕಾಗಿದ್ದು ಈ ಪ್ರದೇಶಗಳಲ್ಲಿ ಬಾಕಿವಿರುವ ಒಳಚರಂಡಿ ಕಾಮಗಾರಿ ತುರ್ತಾಗಿ ಪೂರ್ಣಗೊಳಿಸಲು ಕೋರಿದರು.
- ಶ್ರೀನಿವಾಸರಾವ್ ಅಮರಜ್ಯೋತಿನಗರ ರವರು ಮಾತನಾಡಿ ಅಮರಜ್ಯೋತಿ ನಗರದಅಡ್ಡ ರಸ್ತೆಗಳು ತುಂಬಾ ಹಾಳಾಗಿದ್ದು ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವ ಕಾರಣ ಕೂಡಲೇ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಕೋರಿದರು. ವಾರ್ಡ್ ಅಭಿಯಂತರರು ಮಾತನಾಡಿ ಮಳೆ ಬರುತ್ತಿರುವ ಕಾರಣ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸಾದ್ಯವಾಗಿರುವುದಿಲ್ಲ. ಮಳೆ ಕಡಿಮೆಯಾದ ತಕ್ಷಣ ರಸ್ತೆಗಳ ಅಭಿವ್ರದ್ಧಿ ಕಾಮಗಾರಿ ಪ್ರಾರಂಬಿಸಲಾಗುವುದೆಂದು ತಿಳಿಸಿದರು.
- ಸಾದಿಕ ಬಡಾವಣೆ ನಿವಾಸಿ ಮಾತನಾಡಿ ಸಾದಿಕ ಬಡಾವಣೆಯಲ್ಲಿವಿರುವ ಕೊಳಬೆ ಬಾವಿ ದುರಸ್ತಿಯಲ್ಲಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕಾರಣ ಕೂಡಲೇ ದುರಸ್ತಿ ಮಾಡಲು ಕೋರಿದರು.
- ಹೆಗಡೆನಗರದ ಪಶ್ಚಿಮ ಭಾಗದ 2ನೇ ಅಡ್ಡರಸ್ತೆಯ ನಿವಾಸಿಗಳು ಮಾತನಾಡಿ ಹೆಗಡೆನಗರದ 2ನೇ ಅಡ್ಡರಸ್ತೆಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆವಿದ್ದು ಹೊಸದಾಗಿ ಪೈಪುಲೈನ್ ಅಳವಡಿಸುವುದು ಅವಶ್ಯಕಾವಾಗಿರುತ್ತದೆ ಎಂದು ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಕೂಡಲೇ ಹೊಸದಾಗಿ ಅವಶ್ಯವಿರುವ ಪೈಪುಲೈನ್ ಅಳವಡಿಸಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸೂಚಿಸಿದರು.

3. ವಾರ್ಡ್ ವ್ಯಾಪ್ತಿಯಲ್ಲಿಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ

- ದಾಸಪ್ಪ ಹೆಗಡೆನಗರ ರವರು ಮಾತನಾಡಿ ದೊರೆ ಮತ್ತು ರಾಣಿ ರವರು ಆಟೋ ಟಿಪ್ಪರಗಳು ಮನೆ ಮನೆಗಳಿಂಗ ಪ್ರತಿ ದನ ಕಸ ಸಂಗ್ರಹಿಸಲಾಗುತ್ತಿಲ್ಲ. ಆದ್ದರಿಂದ ಸದರ ಪ್ರದೇಶದಕ್ಕೆ ಬೇರೆ ಆಟೋ ಟಿಪ್ಪರಗಳನ್ನು ನೇಮಿಸಬೇಕಾಗಿ ಕೊರಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಯನ್ನು ಸರಿಯಾಗಿಆಗುತ್ತಿರುವುದಿಲ್ಲ ಎಂದು ಸಾರ್ವಜನಿಕರು ಹಾಗೂ ವಿವಿಧ ಬಡಾವಣೆಗಳಿಂದ ಹಾಜರಾದ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರುಗಳು ಹಾಗೂ ಸಾರ್ವಜನಿಕರು ತಿಳಿಸಿದರು. ಈ ವಿಷಯದ ಬಗ್ಗೆ ಸಂಬಂದಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರಾದ ಶ್ರೀಮತಿ ಚಿತ್ರಾ ಜಯರಾಮ ರವರು ಮಾತನಾಡಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ ಶೀಘ್ರದಲ್ಲಿ ಹೊಸದಾಗಿ ಗುತ್ತಿಗೆದಾರರನ್ನು ನೇಮೀಸಲಾಗುತ್ತಿದ್ದು, ಹೊಸದಾಗಿ ಗುತ್ತಿಗೆದಾರನ್ನು ನೇಮಿಸಿದ ಕೂಡಲೇ ಬ್ಲಾಕ್ ಸ್ಪಾಟ್‌ಗಳಲ್ಲಿನ ತ್ಯಾಜ್ಯ ಮತ್ತು ಮನೆ ಮನೆಗಳಿಂದ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯ ಸಮರ್ಪಕವಾಗಿ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.
- 

4. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಬಗ್ಗೆ.

- ದಾಸಪ್ಪ ಹೆಗಡೆನಗರ ರವರು ಮಾತನಾಡಿ ಹೆಗಡೆನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಹಳಷ್ಟು ರಸ್ತೆಗಳಲ್ಲಿ ಬೀದಿ ದೀಪಗಳು ದುರಸ್ಥಿಯಲ್ಲಿದ್ದು, ಸಕಾಲದಲ್ಲಿ ಬೀದಿ ದೀಪಗಳನ್ನು ದುರಸ್ತಿ ಮಾಡುತ್ತಿರುವುದಿಲ್ಲ ಎಂದು ತಿಳಿಸಿದರು ಹಾಗೂ ಹೈ ಮಾಸ್ಟ್ ಲೈಟ್ ಸಹ ದುರಸ್ತಿಯಲ್ಲಿರುವುದಾಗಿ

ತಿಳಿಸಿದರು. ಸದರಿ ವಿಷಯದ ಬಗ್ಗೆ ಮಾನ್ಯ ನೋಡಲ್ ಅಧೀಕಾರಿಗಳು ಮಾತನಾಡಿ ಬೀದಿ ದೀಪಗಳನ್ನು ಸಕಾಲದಲ್ಲಿ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಪ್ರದೇಶಗಳಲ್ಲಿ ಪರಿಶೀಲಿಸಿ ದುರಸ್ತಿ ಕಾರ್ಯವನ್ನು ಮಾಡಲು ಬಿ.ಬಿ.ಎಂ.ಪಿ ಯಲಹಂಕ ವಲಯದ ಕಿರಿಯ ಅಭಿಯಂತರಾದ ಶ್ರೀ ಬಾಬುರೆಡ್ಡಿ ರವರಿಗೆ ತಿಳಿಸಿದರು. ಶ್ರೀ ಬಾಬು ರೆಡ್ಡಿ ಕಿ.ಅ ರವರು ಮಾತನಾಡಿ ಬೀದಿ ದೀಪಗಳ ದುರಸ್ತಿ ಬಗ್ಗೆ ಸಾರ್ವಜನಿಕರು ನೇರವಾಗಿ ಸಂಪರ್ಕಿಸಬೇಕಾಗಿ ತಿಳಿಸಿದರು.

5. **ಇನ್ನಿತರೆ ವಿಷಯಗಳು ಮಾನ್ಯ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ**

- **ಶ್ರೀ ದಾಸಪ್ಪ ಹೆಗಡೆನಗರ ರವರು** ಮಾತನಾಡಿ ಮತದಾರರ ಪಟ್ಟಿಯಲ್ಲಿ ಒಂದೇ ಮನೆಯ ನಿವಾಸಿಗಳ ಹೆಸರುಗಳು ಬೇರೆ ಬೇರೆ ಬೂತಗಳಲ್ಲಿ ಬರುತ್ತಿದ್ದು, ಅಂತಹ ಹೆಸರುಗಳು ಒಂದೇ ಬೂತಯಲ್ಲಿ ಬರುವ ಹಾಗೆ ಕಂದಾಯ ವಿಭಾಗದ ಅದಿ ಮತ್ತು ಕೆಲವರು ಹೆಗಡೆನಗರದಿಂದ ಸ್ಥಳಾಂತರವಾಗಿದ್ದು, ಕೆಲವರು ಮರಣ ಹೊಂದಿದ್ದು, ಅಂತಹ ಹೆಸರುಗಳನ್ನು ಪರಿಶೀಲಿಸಿ ಮತದರ ಪಟ್ಟಿಯಿಂದ ಕೈಬೀಡಬೇಕಾಗಿ ಕೋರಿದರು.
- **ಸಾರ್ವಜನಿಕರು ಮಾತನಾಡಿ** ಬಹಳಷ್ಟು ಪ್ರದೇಶಗಳಲ್ಲಿ ನೀರಿನ ಸಮಸ್ಯವಿದ್ದು, ಪೈಪುಲೈನ್ ದುರಸ್ತಿವಿದ್ದು ವಾಟರ್ ಮೆನಗಳ ಸಭೆ ಕರೆಯಬೇಕಾಗಿ ಕೊರಿದರು. ಮಾನ್ಯ ನೋಡಲ್ ಅಧೀಕಾರಿಗಳು ಮತನಾಡಿ ವಾರ್ಡ್ ನಂ 06 ರಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಟರ್‌ಮೆನ್‌ಗಳ ಪ್ರತ್ಯೇಕ ಸಭೆಯನ್ನು ಕರೆಯಬೇಕಾಗಿ ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಿಶೇಷ ಆಯುಕ್ತರು (ಆಸ್ತಿಗಳು) ಬಿ.ಬಿ.ಎಂ.ಪಿ ರವರು ಮಾತನಾಡಿ ಮೇಲ್ಕಂಡಂತೆ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪ ಕ್ಕೆತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

22.10.2021

**ಕಾರ್ಯದರ್ಶಿ**
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)ಹಾಗೂ

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ವಿಶೇಷ ಆಯುಕ್ತರು(ಆಸ್ತಿಗಳು)ಬಿ.ಬಿ.ಎಂ.ಪಿ

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.